PAPER CLIPPINGS
ಇಲಾಖೆ / ವಿಷಯ : DEPARTMENT / SUBJECT
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

[illegible]

# ವಿಧಾನಸೌಧ ತೊಳೆಯಲಿಕ್ಕೆ 59 ಲಕ್ಷ ರೂ. ಖರ್ಚು!

■ ಶ್ರೀಕಾಂತ್ ಶೇಷಾದ್ರಿ ಬೆಂಗಳೂರು

ಕಟ್ಟಡವನ್ನು ನೀರಲ್ಲಿ ತೊಳೆಯಲು ಲಕ್ಷಗಟ್ಟಲೆ ವೆಚ್ಚ ಮಾಡುವುದನ್ನು ಎಲ್ಲಾದರೂ ನೋಡಿದ್ದೀರಾ? ಇದು ಸಂಭವಿಸುತ್ತಿರುವುದು ರಾಜ್ಯದ ಶಕ್ತಿಕೇಂದ್ರ ವಿಧಾನಸೌಧದಲ್ಲಿ. ಕರೊನಾ ಮತ್ತು ಲಾಕ್‌ಡೌನ್ ಹಿನ್ನೆಲೆಯಲ್ಲಿ ಸರ್ಕಾರದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಇದೇ ಕಾರಣಕ್ಕೆ ನೇಮಕಾತಿ ಪ್ರಕ್ರಿಯೆಗಳೆಲ್ಲ ಮುಂದೂಡಿಕೆಯಾಗಿವೆ. ಯೋಜನೆಗಳಿಗೆ ಹಣ ಕೊಡುವಾಗ ಸರ್ಕಾರ ಕೈ ಸಡ್ಡಾದು ಮಾಡುತ್ತಿದೆ. ಆದರೆ, ಕಟ್ಟಡ ತೊಳೆಯಲು 59 ಲಕ್ಷ ರೂ. ವೆಚ್ಚ ಮಾಡಲು ಅಧಿಕಾರಿಗಳು ತಯಾರಿ ನಡೆಸಿದ್ದಾರೆ.



ವಿಧಾನಸೌಧದ ಒಳಗೆ ಗುಡಿಸಿ ಗುಂಡಾಂತರ ಮಾಡೋ ಟೆಂಡರ್ ಯಾವ್ಯಾವತ್ತ ಬಿದ್ದಾ ಬಾಳು...?

ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಸಂಖ್ಯೆ 1, ಕಟ್ಟಡ ವಿಭಾಗದವರು ವಿಧಾನಸೌಧವನ್ನು ನೀರಲ್ಲಿ ತೊಳೆಯುವುದಕ್ಕಾಗಿಯೇ ಟೆಂಡರ್ ಕರೆದಿದ್ದಾರೆ. ಇದಕ್ಕಾಗಿ ಅರ್ಹತೆ ಮತ್ತು ಅಗತ್ಯತೆಯನ್ನೂ ಗೊತ್ತು ಮಾಡಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಿದ್ದಾರೆ. ಸದ್ಯದ ಮಾಹಿತಿ ಪ್ರಕಾರ, ನವೆಂಬರ್ 24ರಂದು ಟೆಂಡರ್ ಸಲ್ಲಿಕೆಗೆ ಅವಕಾಶ ಮುಗಿದಿದ್ದು ಮುಂದಿನ ಪ್ರಕ್ರಿಯೆಗಳು ಆರಂಭವಾಗಿದೆ. ಅಂದಹಾಗೆ ವಿಧಾನಸೌಧದ ಕಾರಿಡಾರ್‌ಗಳು, ಪೋರ್ಟಿಕೋಗಳು, ಮಹಡಿ ಮೆಟ್ಟಿಲುಗಳ ಮೇಲೆ ಹಾದು ಹೋಗುವ ಸಾಮಾನ್ಯ ತೆರೆದ ಸ್ಥಳಗಳನ್ನು ರಭಸದಿಂದ ನೀರು ಹಾಕಿ ತೊಳೆಸುವುದು ಅಧಿಕಾರಿಗಳ ಉದ್ದೇಶವಾಗಿದೆ.

ನೀರಲ್ಲಿ ತೊಳೆಯಲು ಇಷ್ಟೊಂದು ಹಣ ಖರ್ಚಾಗುತ್ತದೆಯೇ ಎಂದು ಲೋಕೋಪಯೋಗಿ ಅಧಿಕಾರಿಗಳನ್ನು ಪ್ರಶ್ನಿಸಿದರೆ, ನೀರನ್ನು ಹಾಯಿಸುವ ಜತೆಗೆ ಹಾಳಾದ ನೀರು ಸರಬರಾಜು, ಸ್ಯಾನಿಟರಿ ಅಳವಡಿಕೆ, ಹಾಳಾದ ಹಾರ್ಡ್‌ವೇರ್ ಮತ್ತು ಮುರಿದು ಹೋಗಿರುವ ಕಿಟಕಿ ಗಾಜುಗಳನ್ನು ಬದಲಾಯಿಸುವುದು ಸೇರಿ ಕಿಟಕಿಗಳ ನಿರ್ವಹಣೆ ಈ ಟೆಂಡರ್‌ನಲ್ಲಿ ಸೇರಿದೆ ಎಂದು ವಿವರಿಸುತ್ತಾರೆ. ಒಟ್ಟಾರೆ ಏಳು ತಿಂಗಳಲ್ಲಿ ಕಾಮಗಾರಿ ಮುಗಿಸಲು ಕಾಲಾವಧಿ ನೀಡಲಾಗಿದ್ದು, ಮುಂಗಡ ಠೇವಣಿಯಾಗಿ 1.18 ಲಕ್ಷ ರೂ. ಕಟ್ಟಿಸಿಕೊಳ್ಳಲಾಗಿದೆ.

ಆರ್‌ಟಿಐ ಕಾರ್ಯಕರ್ತರೂ ಈ ಬೆಳವಣಿಗೆ ಮೇಲೆ ಕಣ್ಣಿಟ್ಟಿದ್ದು, ಬೆನ್ನು ಬಿದ್ದಿದ್ದಾರೆ. ಸಾಮಾಜಿಕ ಕಾರ್ಯಕರ್ತರೊಬ್ಬರು ಪ್ರತಿಕ್ರಿಯಿಸಿ, ಸರ್ಕಾರದ ಹಣ ಪೋಲು ಮಾಡಲು ನಿಂತಂತೆ ಕಾಣಿಸುತ್ತಿದೆ. ಕಟ್ಟಡ ತೊಳೆಯಲು, ಹಾಳಾಗಿರುವ ಪೈಪು ಬದಲಿಸಲು ಇಷ್ಟು ಹಣ ಬೇಕೆ? ಯಾವೆಲ್ಲ ಕೆಲಸ ಮಾಡಿಸುತ್ತಿದ್ದಾರೆಂದು ಗಮನಿಸುತ್ತಿದ್ದೇವೆ ಎಂದು ತಿಳಿಸಿದರು.

ಸಿಎಂ ಯಡಿಯೂರಪ್ಪ, ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಗಮನಕ್ಕೆ ಬಾರದೆ ಈ ಕೆಲಸ ಆಗುತ್ತಿದೆಯೇ ಎಂಬ ಪ್ರಶ್ನೆಗಳು ಎದ್ದಿವೆ.

## ಅನುಮಾನಗಳಿಗೆ ಕಾರಣ?

1 ವಿಧಾನಸೌಧ ಕಟ್ಟಡ ನಿರ್ವಹಣೆಗೆಂದು ಸರ್ಕಾರ ಪ್ರತಿ ವರ್ಷ 2 ಕೋಟಿ ರೂ. ವೆಚ್ಚ ಮಾಡುತ್ತದೆ. ಹಾಗಿದ್ದರೂ, ಈ ಕೆಲಸಕ್ಕೆ ಮತ್ತೇಕೆ ವೆಚ್ಚ ಮಾಡಬೇಕು.

2 ಕಾರಿಡಾರ್‌ಗಳನ್ನು ನೀರಿನಲ್ಲಿ ರಭಸವಾಗಿ ತೊಳೆಯುವಷ್ಟು ಅಲ್ಲಿ ಮಣ್ಣು, ಕೊಳಚೆ ರಾಶಿ ಬಿದ್ದಿದೆಯೇ?

3 ಸ್ವಚ್ಛತಾ ಕಾರ್ಯಕ್ಕೆಂದು ಹೊರಗುತ್ತಿಗೆ ಸಿಬ್ಬಂದಿ ಇದ್ದಾರೆ, ಡಿ ಗ್ರೂಪ್ ನೌಕರರಿದ್ದಾರೆ. ಅವರೆಲ್ಲ ತಮ್ಮ ಕರ್ತವ್ಯ ನಿರ್ವಹಿಸುವಾಗ ಮತ್ತೆ ಸ್ವಚ್ಛತೆ ನೆಪವೇಕೆ?

4 ಒಂದೊಮ್ಮೆ ರಭಸದಿಂದ ನೀರು ಬಿಡಿಸುವಷ್ಟು ಅನಿವಾರ್ಯತೆ ಇದ್ದರೆ, ಅದಕ್ಕೆ ಇಷ್ಟೊಂದು ದೊಡ್ಡ ಮೊತ್ತದ ಅಗತ್ಯವಿದೆಯೇ?